ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ದಿನಾಂಕ ೧೩ನೇ ಜೂನ್ ೧೯೮೮ ಜ್ಯೇಷ್ಠ ೨೩; ೧೯೧೦ ಶಕ.

ಸದನವು ವಿಧಾನ ಸೌಧದಲ್ಲಿರಂಭ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೦–೨೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು.]

ಸಂತಾಪ ಸೂಚನಾ ನಿರ್ಣಯ

ಅಧ್ಯಕ್ಷರು.— ಮಾಜಿ ಶಾಸಕರಾದ ಶ್ರೀ ಡಿ. ವೆಂಕಟೇಶ್‌ರವರು ದಿನಾಂಕ ೧೧ನೇ ಜೂನ್ ೮೮ ರಂದು ನಿಧನರಾದರೆಂದು ತಿಳಿಸಲು ನಾನು ವಿಷಾದಿಸುತ್ತೇನೆ. ಶ್ರೀ ಯುತರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು, ಅವರು ಪ್ರಮುಖ ಕಾರ್ಮಿಕ ಮುಖಂಡರಾಗಿ 'ಇಂಟಕ್' ಮುಖಾಂತರ ಕಾರ್ಮಿಕರ ಕಲ್ಯಾಣಕ್ಕಾಗಿ ಸೇವೆಯನ್ನು ಸಲ್ಲಿಸಿದ್ದರು.

ಶ್ರೀಯುತರು ೧೯೫೭ರಿಂದ ೧೯೫೭ನೇ ಇಸವಿಯವರೆಗೆ ಮೊದಲನೆಯ ವಿಧಾನ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

ನಿಧನ ಹೊಂದಿದ ಸದಸ್ಯರ ಗೌರವದ ಆಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರುಗಳು ಮೌನವನ್ನು ಆಚರಿಸಿದರು)

ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅಗಲಿದ ಸದಸ್ಯರ ಕುಟುಂಬದವರಿಗೆ ಕಳುಹಿಸಿ ಕೊಡಲಾಗುವುದು.

ವಿತ್ತೀಯ ಕಾರ್ಯಕಲಾಪಗಳು

(ಬೇಡಿಕೆ ಸಂಖ್ಯೆ ೬೫, ೬೬ ಮತ್ತು ೬೦ಕ್ಕೆ ಉತ್ತರ)

ಸಮಾಜ ಕಲ್ಯಾಣ ಮತ್ತು ರಸ್ತೆ ಸಾರಿಗೆ ಇಲಾಖೆಗಳು

ಅಧ್ಯಕ್ಷರು.— ಈಗ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳಿಂದ ಉತ್ತರ.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).— ಸನ್ಮಾನ್ಯ ಅಧ್ಯಕ್ಷರೇ, ಸಮಾಜ ಕಲ್ಯಾಣ ಬೇಡಿಕೆಯ ಮೇಲೆ ಈ ಮನೆಯ ೯ ಜನ ಸದಸ್ಯರು ಮಾತನಾಡಿದ್ದಾರೆ. ಹಿಂದುಳಿದವರ ಬಗ್ಗೆ ಪರಿಶಿಷ್ಟ ಜಾತಿ ಪರಿಶಿಷ್ಟ ಜನಾಂಗದವರ ಬಗ್ಗೆ ಹೆಣ್ಣು ಮಕ್ಕಳ ಬಗ್ಗೆ, ಅಂಗವಿಕಲರ ಬಗ್ಗೆ ಮತ್ತು ಅಲ್ಪಸಂಖ್ಯಾತರ ಬಗ್ಗೆ ಬಹಳಕಳಕಳಿಯಿಂದ ಈ ಸಭೆಯ ಗಮನವನ್ನು ಸೆಳೆದಿದ್ದಾರೆ. ನನ್ನ ಗಮನವನ್ನೂ ಕೂಡ ಸೆಳೆದಿದ್ದಾರೆ. ಪ್ರತಿಯೊಬ್ಬ ಸದಸ್ಯರೂ ಮಾತನಾಡಿದ ವಿಷಯವನ್ನು ಗಮನಿಸಿದರೆ ಈ ಸಮಾಜದ ದುರ್ಬಲವರ್ಗದವರ ಬಗ್ಗೆ ಇಟ್ಟಿರತಕ್ಕಂತಹ ಆಸಕ್ತಿ, ಕಳಕಳಿ ಎಷ್ಟು ಎನ್ನುವುದು ಎದ್ದು ಕಾಣುತ್ತದೆ ಆದಕ್ಕಾಗಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಇನ್ನು ಕೆಲವರು ರಚನಾತ್ಮಕವಾದ ಟೀಕೆಗಳನ್ನು ಮಾಡಿದ್ದಾರೆ ಕೆಲವರು ಸಲಹೆಗಳನ್ನು ಕೊಟ್ಟಿದ್ದಾರೆ ಅದು ಏನೇ ಇರಲೀ ನಾನು ಅವರೆಲ್ಲ